ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಹೆಬ್ಬೂರು ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 31.10.15

ಈ ವಾರದ ಮುನ್ಸೂಚನೆ (31-10-15 to 04.11.15 ವರೆಗೆ)

ನಿಯತಾಂಕಗಳು	31/10/15	01/11/15	02/11/15	03/11/15	04/11/15
ಮಳೆ (ಮಿ ಮಿ)	0	10	19	6	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	28	28	27	28
ಕನಿಷ್ಠ ಉಷ್ಣಾಂಶ (ಡಿ.ಸೆ.)	19	21	20	18	17
ಮೋಡ (ಪ್ರಮಾಣ)	6	6	5	5	3
ಆರ್ದ್ರತೆ ೭.೨೦ ಬೆ (ಶೇ)	100	100	97	96	94
ಆರ್ದ್ರತೆ ೨.೨೦ ಮ (ಶೇ)	59	66	65	68	51
ಗಾಳಿಯ ವೇಗ (ಕಿ.ಮಿ/ಗಂಟೆಗೆ)	13	15	7	10	11
ಗಾಳಿಯ ದಿಕ್ಕು (ಡಿಗ್ರಿ)	83	95	103	71	40

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಹೆಬ್ಬೂರು ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ದಿನದ ಗರಿಷ್ಠ ಉಷ್ಣಾಂಶವು 27-28^{o}C ಮತ್ತು ಕನಿಷ್ಠ 17-21^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 94-100% ಇದ್ದು, ಮಧ್ಯಾಹ್ನ 51-68% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 7-15 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಹಿಂಗಾರು ಬೆಳೆಗಳು:

- ✓ **ಕೆಂಪು ಮಣ್ಣಿಗೆ ಸೂಕ್ತವಾದ ಬೆಳೆಗಳು**: ಶಕ್ತಿಮಾನ್ ಮುಸುಕಿನ ಜೋಳ (ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಎನ್.ಎ,ಹೆಚ್–1137), ಪಾಪ್ ಕಾರ್ನ್ (ಅಂಬರ್), ಸೂರ್ಯಕಾಂತಿ (ಮಾರ್ಡೆನ್, ಕೆ.ಬಿ.ಎಸ್.ಹೆಚ್–1, 41,42,44 ಮತ್ತು 53), ರಾಗಿ (ಇಂಡಾಫ್–7, ಇಂಡಾಫ್–9, ಇಂಡಾಫ್–15 ಮತ್ತು ಎಮ್.ಎಲ್–365) ಮತ್ತು ಅವರೆ (ಹೆಚ್.ಎ.–3, ಹೆಚ್–4).
- ✓ **ಕಪ್ಪು ಮಣ್ಣಿನಲ್ಲಿ ಬಿತ್ತಬೇಕಿರುವ ಬೆಳೆಗಳ ಬಿತ್ತನೆಗೆ ಹದವಾದ ಮಳೆ ಬರುವವರೆಗೆ ಕಾಯಬೇಕು.**
- ✓ **ಕಪ್ಪು ಮಣ್ಣಿಗೆ ಸೂಕ್ತವಾದ ಬೆಳೆಗಳು:** ಮಧ್ಯಮ ಆಳವುಳ್ಳ ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಹಿಂಗಾರು ಬೆಳೆಗಳಾದ ಕಡಲೆ, ಸೂರ್ಯಕಾಂತಿ, ಕುಸುಮೆ, ಜೋಳ ಮತ್ತು ಗೋಧಿ ಬೆಳೆಗಳನ್ನು ಬಿತ್ತನೆ ಮಾಡಬಹುದಾಗಿದೆ.
- ✓ **ಹಿಂಗಾರು ಮಳೆಯು ಅಕ್ಟೋಬರ್ ೨೮ರಂದು ರಾಜ್ಯವನ್ನು ಪ್ರವೇಶಿಸಿದ್ದು, ಮುಂದಿನ ಒಂದು ವಾರದ ಕಾಲ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಯಿದೆ.**
- ✓ **ಆದ್ದರಿಂದ ರೈತರು ಹಿಂಗಾರು ಬೆಳೆಗಳನ್ನು ಬಿತ್ತನೆ ಮಾಡಬಹುದು.**

ಸಸ್ಯ ಸಂರಕ್ಷಣೆ:

ತೊಗರಿಯಲ್ಲಿ ಕಾಯಿ ಕೊರಕ ಹುಳು ಕಂಡು ಬಂದರೆ ಹೊಲದಲ್ಲಿ ಅಲ್ಲಲ್ಲಿ ಮರದ ಕೊಂಬೆಗಳನ್ನು ನೆಟ್ಟು ಪಕ್ಷಿಗಳನ್ನು ಆಕರ್ಷಿಸಬೇಕು. ಪಕ್ಷಿಗಳು ಹುಳುಗಳನ್ನು ತಿಂದು ಅವುಗಳ ಸಂಖ್ಯೆ ಕಡಿಮೆಯಾಗುತ್ತದೆ. ಬೇವಿನ ಕಷಾಯವನ್ನು ಸಿಂಪಡಣೆ ಮಾಡಬೇಕು. ಹುಳುಗಳ ತೀವ್ರತೆ ಜಾಸ್ತಿಯಿದ್ದರೆ ಮೆಥೋಮಿಲ್ ಅಥವಾ ಇಂಡಾಕ್ಸಿಕಾರ್ಬ್ ರಾಸಾಯನಿಕ ಕೀಟನಾಶಕಗಳನ್ನು ಸಿಂಪಡಿಸಬೇಕು.

ನೋಡಲ್ ಅಧಿಕಾರಿ:
ಕೃಷಿ ಹವಾಮಾ ನವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು